ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಉಡುಪಿ ನ್ಯಾಯಾಲಯದಲ್ಲಿ "ಕಾಪಿಯರನ್ನು" ಬದಲಾಯಿಸಿ ಜೆರಾಕ್ಸ್ ಯಂತ್ರವನ್ನು ಅಳವಡಿಸುವ ಬಗ್ಗೆ

499 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ನ್ಯಾಯಾಲಯದಲ್ಲಿ ದಿನಕ್ಕೆ 100 ಪ್ರತಿಗಳನ್ನು ತೆಗೆಯುವ ಸಾಮರ್ಥ್ಯವಿರುವ ಕೋಪಿಯರ್ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಇದೇ ಕೋಪಿಯರ್‌ನಿಂದ ಉಡುಪಿ, ಕುಂದಾಪುರ, ಕಾರ್ಕಳ ನ್ಯಾಯಾಲಯಗಳ ದಾಖಲೆಗಳ ಪ್ರತಿ ತೆಗೆಯಬೇಕಾದುದರಿಂದ, ತುಂಬಾ ವಿಳಂಬವಾಗುವುದೆಂಬ ದೂರು ಸಾರ್ವಜನಿಕರಿಂದ ಸರಕಾರಕ್ಕೆ ಬಂದಿದೆಯೇ?

ಇ) ದಿನಕ್ಕೆ 1500 ಪ್ರತಿಗಳ ಬೇಡಿಕೆ ಇರುವ ಈ ನ್ಯಾಯಾಲಯಕ್ಕೆ ಝೆರಾಕ್ಸ್ ಯಂತ್ರವನ್ನು ಅಳವಡಿಸುವ ಯೋಜನೆ ಸರಕಾರದ ಮುಂದಿದೆಯೇ?

ಈ) ಸರಕಾರದ ಯೋಜನೆಯಿದ್ದಲ್ಲಿ ಯಾವಾಗ ಎಷ್ಟು ತಿಂಗಳಲ್ಲಿ ಅಳವಡಿಸಲಾಗುವುದು?

ಶ್ರೀ ಯಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಹೌದು

ಆ) ವಿಳಂಬವಾಗುವುದು ನಿಜವಾಗಿದ್ದರೂ, ಈ ಬಗ್ಗೆ ಸಾರ್ವಜನಿಕರಿಂದ ಸರ್ಕಾರಕ್ಕೆ ದೂರುಗಳು ಬಂದಿಲ್ಲ

ಇ) ಹೌದು

ಈ) ರಾಜ್ಯದ ಎಲ್ಲ ಸಿವಿಲ್ ನ್ಯಾಯಾಲಯಗಳಲ್ಲಿ 1000 ಪ್ರತಿಗಳಿಗಿಂತ ಹೆಚ್ಚಿನ ಶಕ್ತಿಯ ಕಾಪಿಯರ್ ಯಂತ್ರಗಳನ್ನು ಒದಗಿಸಲು ಹೆಚ್ಚುವರಿ ಅನುದಾನಕ್ಕಾಗಿ ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಕೆ.ಆರ್. ಸಾಗರದ ವಿಶ್ವೇಶ್ವರಯ್ಯ ಮತ್ಸ್ಯಾಲಯ ನಿರ್ಮಾಣ ಕಾರ್ಯ

496 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್. ಸಾಗರದಲ್ಲಿ "ವಿಶ್ವೇಶ್ವರಯ್ಯ ಮತ್ಸ್ಯಾಲಯ" ನಿರ್ಮಾಣ ಕಾರ್ಯವನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು?

ಆ) ಹಾಗಿದ್ದಲ್ಲಿ ಈ ಕಾರ್ಯವನ್ನು ಇದುವರೆಗೂ ಪೂರ್ತಿಗೊಳಿಸದಿರಲು ಕಾರಣಗಳೇನು?

ಇ) ಸಾರ್ವಜನಿಕರ ಪ್ರವೇಶಕ್ಕೆ ಯಾವಾಗ ತೆರೆಯಲಾಗುವುದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಕೆ.ಆರ್. ಸಾಗರದಲ್ಲಿ ವಿಶ್ವೇಶ್ವರಯ್ಯ ಮತ್ಸ್ಯಾಲಯದ ನಿರ್ಮಾಣ ಕಾರ್ಯವನ್ನು 1987-88ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು.

ಅ) "ಮತ್ಸ್ಯಾಲಯ ಕಟ್ಟಡ ಕಾಮಗಾರಿಯನ್ನು ನೀರಾವರಿ ಇಲಾಖೆಯವರ ನಿರ್ವಹಿಸುತ್ತಿದ್ದು, 1989-90ನೇ ಸಾಲಿನಲ್ಲಿ ಬಹುಮಟ್ಟಿಗೆ ಕೆಲಸವನ್ನು ಪೂರ್ಣಗೊಳಿಸಿರುವರು ಮತ್ಸ್ಯಾಲಯಗಳಲ್ಲಿ ನಿರ್ಮಿಸಬೇಕಾದ ಮೀನು ತೊಟ್ಟಿಗಳ ನಿರ್ಮಾಣ, ಒಳಾಂಗಣ ವ್ಯವಸ್ಥೆ, ಅಲಂಕಾರ ಕೆಲಸಗಳು ಸೂಕ್ಷ್ಮ ಮತ್ತು ಆಧುನಿಕ ತಂತ್ರಜ್ಞಾನದಿಂದ ಕೂಡಿರುವುದರಿಂದ ಮತ್ಸ್ಯಾಲಯದ ಒಳಗಿನ ವ್ಯವಸ್ಥೆಯ ಕೆಲಸಗಳಿಗೆ ನಿಗದಿತ ದರಪಟ್ಟಿ ಇಲ್ಲದೇ ಇರುವುದರಿಂದ ಬೇರೆ ಬೇರೆ ಸ್ಥಳಗಳಿಂದ ಸಂಬಂಧಪಟ್ಟ ಮಾಹಿತಿಗಳನ್ನು ಸಂಗ್ರಹಿಸಿ ಅಂದಾಜು ತಯಾರಿಸಬೇಕಾಯಿತು. ಮೂಲ ಅಂದಾಜಿನಲ್ಲಿ ಈ ಕೆಲಸಗಳಿಗೆ ವಿವರವಾದ ಅಂದಾಜುಪಟ್ಟಿ ಮತ್ತು ಕೆಲಸದ ವಿವರ ತಯಾರು ಮಾಡಿಲ್ಲದುದರಿಂದ ಪರಿಷ್ಕೃತ ಅಂದಾಜನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆದು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ದಿ : 25-3-93ರಲ್ಲಿ ಪಡೆಯಲಾಯಿತು. 1994ರಲ್ಲಿ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ನೇತೃತ್ವದಲ್ಲಿ ನೀರಾವರಿ ಇಲಾಖೆಯನ್ನೊಳಗೊಂಡಂತೆ ಮತ್ಸ್ಯಾಲಯದ ಕಾಮಗಾರಿಗೆ ಟೆಂಡರನ್ನು ಕರೆಯಲು ಸಮಿತಿಯೊಂದನ್ನು ರಚಿಸಲಾಗಿದ್ದು, ಸಾಕಷ್ಟು ಸ್ಪರ್ಧಾತ್ಮಕ ಟೆಂಡರುಗಳು ಸ್ವೀಕೃತವಾಗಿಲ್ಲದೇ ಇದ್ದುದರಿಂದ ಮತ್ತು ಹೆಚ್ಚುವರಿ ಕಾರ್ಯದರ್ಶಿಗಳು ನಿವೃತ್ತಿ ಹೊಂದಿರುವುದರಿಂದ ಪುನಃ ಸರ್ಕಾರವು ನೀರಾವರಿ ಇಲಾಖೆಗೆ ಟೆಂಡರನ್ನು ಕರೆಯುವ ಕಾರ್ಯವನ್ನು ವಹಿಸಿತ್ತು. ಈ ಕೆಲಸಗಳಿಗೆ ಟೆಂಡರನ್ನು ಕರೆಯಲಾಗಿದ್ದು, ನೀರಾವರಿ ಇಲಾಖೆಯು ಕೆಲಸಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುತ್ತಿದೆ.

ಇ) ಆದಷ್ಟು ಶೀಘ್ರ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಸಾರ್ವಜನಿಕ ಪ್ರವೇಶಕ್ಕೆ ತೆರೆಯಲಾಗುವುದು.

ಉಡುಪಿ ನ್ಯಾಯಾಲಯದ ಕಟ್ಟಡ, ನೀರು ಸರಬರಾಜು ಕುರಿತು

498 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ನ್ಯಾಯಾಲಯದ ಕಟ್ಟಡ ನಿರ್ವಹಣೆಗೆ ಈವರೆವಿಗೆ ಒದಗಿಸಲಾಗಿರುವ ಹಣವೆಷ್ಟು?

ಆ) ಈ ಕಟ್ಟಡ ಮತ್ತು ವಕೀಲರ ಸಂಘದ ಕಟ್ಟಡ ತುಂಬಾ ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ನ್ಯಾಯಾಲಯಕ್ಕೆ ನೀರು ಸರಬರಾಜು, ಕಟ್ಟಡ ವಿಸ್ತರಣೆ ಮತ್ತು ವೀಡೋಪಕರಣ ವ್ಯವಸ್ಥೆಗಾಗಿ ಈಗಾಗಲೇ ಅರ್ಜಿಗಳು ಸರ್ಕಾರಕ್ಕೆ ಬಂದಿದೆಯೇ?

ಈ) ಅರ್ಜಿಗಳು ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಯಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಪ್ರತಿ ವರ್ಷ ಕಟ್ಟಡದ ನಿರ್ವಹಣೆ ವೆಚ್ಚ 13,550.00 ರೂ. ಖರ್ಚು ಮಾಡಲಾಗುತ್ತಿದೆ.

ಆ) ಹೌದು

ಇ) ಹೌದು. ಫರ್ನೀಚರ್ ಒದಗಿಸುವ ಬಗ್ಗೆ ಸಾರ್ವಜನಿಕರಿಂದಾಗಲೀ ಅಥವಾ ವಕೀಲರ ಸಂಘದಿಂದಾಗಲೀ ನಿರ್ದಿಷ್ಟ ಕೋರಿಕೆಗಳು ಬಂದಿರುವುದಿಲ್ಲ.